

ಸೂರ್ಯಾಸ್ತದ ಬಣ್ಣಗಳು



ಮೊನ್ಸ್ ಕ್ಲಿಂಟ್ ತಲುಪುವ ಹಸಿರು ಹಾದಿ

ದೊರಕುವ ಸುಮಾರು 70 ಮಿಲಿಯನ್ ವರ್ಷಗಳ ಹಿಂದಿನ ಕ್ರಿಟೇಷಿಯಸ್ ಅವಧಿಯಲ್ಲಿ ಇದ್ದಂತಹ ಸಮುದ್ರ ಜೀವಿಗಳ ಪಳೆಯುಳಿಕೆಗಳು. ಆಗ ಇದ್ದ ಕಡಲ ವಾಸಿಗಳು, ಜೀವ ವೈವಿಧ್ಯ, ವಿಕಾಸ ಇವೆಲ್ಲವುಗಳ ಬಗ್ಗೆ ಆ ಪಳೆಯುಳಿಕೆಗಳು ಬೆಳಕು ಚೆಲ್ಲುತ್ತವೆ. ಕ್ರಿಟೇಷಿಯಸ್ ಅವಧಿಯಲ್ಲಿ ಡೆನ್ಮಾರ್ಕ್ ದೇಶ ಜಲಾವೃತವಾಗಿತ್ತು. ಅಲ್ಲಿನ ಕೋಕೋಲಿತ್ ಆಲ್ಗಿಗಳು, ಸಮುದ್ರದ ತಳಭಾಗದಲ್ಲಿ ಸುಣ್ಣದ ಪದರಗಳಾಗಿ ಶೇಖರಗೊಂಡವು. ನಂತರದಲ್ಲಿ ಸುಮಾರು 11 ಸಾವಿರ ವರ್ಷಗಳ ಹಿಂದೆ ಹಿಮಯುಗದ ಅಂತ್ಯದಲ್ಲಿ ಹಿಮಗಲ್ಲುಗಳ ತಿಕ್ಕಾಟದಿಂದ ಈ ಸುಣ್ಣದ ಕಲ್ಲಿನ ಪುಟ್ಟ ಗುಡ್ಡಗಳು ರೂಪುಗೊಂಡವು ಎಂಬುದು ಅವಶೇಷಗಳ ಅಧ್ಯಯನದಿಂದ ತಿಳಿದುಬಂದ ವಿಷಯ.

ಇಲ್ಲಿನ ಫಲವತ್ತಾದ ಮಣ್ಣು ಹಲವಾರು ಅಪರೂಪದ ಗಿಡಗಳ ಬೆಳವಣಿಗೆಗೆ ಪೂರಕವಾಗಿದ್ದು ಸುಮಾರು 18 ಬಗೆಯ ಆರ್ಕಿಡ್ ಸಸ್ಯಗಳನ್ನು ಇಲ್ಲಿ ಗುರುತಿಸಲಾಗಿದೆ. ಈ ಆರ್ಕಿಡ್‌ಗಳ ಮೇಲೆ ಅವಲಂಬಿತವಾಗಿರುವ ಬ್ಲಾಕ್ ಸ್ಪಾಟೆಡ್ ಬ್ಲೂ ಬರ್ಡ್ ಎಂಬ ಚಿಟ್ಟೆಯ ಪ್ರಭೇದ ಡೆನ್ಮಾರ್ಕ್ ದೇಶದ ಬೇರಾವ ಭಾಗದಲ್ಲೂ ಕಂಡು ಬರುವುದಿಲ್ಲ. ಇನ್ನು ಬೇಸಿಗೆ ಮುಗಿಯುತ್ತಿದ್ದಂತೇ ದಕ್ಷಿಣ ದೇಶಗಳಿಗೆ ವಲಸೆ ಹೋಗುವ ಸಾವಿರಾರು ಹಕ್ಕಿಗಳು ಈ ನೆಲದ ಮೇಲಿಂದ ಹಾದುಹೋಗುವುದನ್ನು ನಾವಿಲ್ಲಿ ವೀಕ್ಷಿಸಬಹುದು. ತನ್ನ ವೇಗಕ್ಕೆ ಹೆಸರಾಗಿರುವ ಪೆರಿಗ್ರಿನ್ ಫಾಲ್ಕನ್ ಎನ್ನುವ ಗಿಡುಗದ ಜಾತಿಗೆ ಸೇರಿದ ಹಕ್ಕಿ ಇಲ್ಲಿನ ಸುಣ್ಣದ ಕಲ್ಲಿನ ಕಡಿದಾದ ಧರೆಯ ರಂಧ್ರಗಳಲ್ಲಿ ಸಂತಾನಾಭಿವೃದ್ಧಿ ಮಾಡುತ್ತದೆ. ಹೀಗಾಗಿ ಮೊನ್ಸ್ ಕ್ಲಿಂಟ್ ಪಕ್ಷಿಪ್ರಿಯರಿಗೆ, ಸಸ್ಯಶಾಸ್ತ್ರಜ್ಞರಿಗೆ, ಪ್ರಾಣಿಶಾಸ್ತ್ರಜ್ಞರಿಗೆ ಅಲ್ಲದೆ ಪರಿಸರಪ್ರೇಮಿಗಳಿಗೆ ಕೂಡ ಆಕರ್ಷಣೆಯ ಬಿಂದುವಾಗಿದೆ. ಹತ್ತಿರದಲ್ಲಿ ಜಿಯೋ ಸೆಂಟರ್ ಮೊನ್ಸ್ ಕ್ಲಿಂಟ್ ಎಂಬ ವಸ್ತು ಸಂಗ್ರಹಾಲಯವಿದ್ದು, ಈ ಜಾಗದಲ್ಲಿ ಸಿಕ್ಕಿರುವಂತಹ ಅಪರೂಪದ ಅವಶೇಷಗಳನ್ನು ಪ್ರದರ್ಶಿಸಲಾಗಿದೆ.

ಊಟದ ಸಮಯ ಮೀರಿ ಹೊಟ್ಟೆ ಚುರುಗುಟ್ಟುತ್ತಿದ್ದುದರಿಂದ ನಾವು ತಿನ್ನಲು ಏನಾದರೂ ದೊರಕೀತೆ ಎಂದು ಹುಡುಕಿದೆವು. ಉತ್ತರದ ದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ, ಶಾಖಾಹಾರಿ ತಿನಿಸುಗಳಿಗೆ ಬೇಡಿಕೆ ಹೆಚ್ಚಿರುವುದರಿಂದ, ಊಟ ದೊರಕುವುದು ಕಷ್ಟವಾಗಲಿಲ್ಲ. ಊಟ ಮುಗಿಸಿ ಅಲ್ಲಿಂದ ಹೊರಟು ಸ್ಟೀವನ್ಸ್ ಕ್ಲಿಂಟ್ ಎನ್ನುವ ಯುನೆಸ್ಕೋ ವಿಶ್ವಪರಂಪರೆಯ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ಇನ್ನೊಂದು ಜಾಗಕ್ಕೆ ಹೋದೆವು. ಇದು 2014ರಲ್ಲೇ ಪರಂಪರೆಯ ಪಟ್ಟಿಗೆ ಸೇರಿದ್ದು, ಕ್ರಿಟೇಷಿಯಸ್ ಅವಧಿಯ ಕೊನೆಯಲ್ಲಿ ಭೂಮಿಗೆ ಅಪ್ಪಳಿಸಿ, ಡೈನೋಸಾರ್‌ಗಳ ಅಳಿವಿಗೆ ಕಾರಣವಾದ ಮೆಟೆಯೋರೈಟ್‌ನ ಪ್ರಭಾವ ಮತ್ತು ನಂತರದ ಪರಿಣಾಮಗಳ ಅಪೂರ್ವ ದಾಖಲೆಯನ್ನು ಒದಗಿಸುತ್ತದೆ. ಮೊನ್ಸ್ ಕ್ಲಿಂಟ್‌ನಷ್ಟು ಆಕರ್ಷಣೀಯವಾಗಿಲ್ಲದಿದ್ದರೂ ವೈಜ್ಞಾನಿಕವಾಗಿ ಮಹತ್ವಪೂರ್ಣವಾಗಿದೆ ಈ ಜಾಗ. ಇನ್ನು ಇಲ್ಲೊಂದು ಹಳೆಯ ಚರ್ಚ್ ಇದೆ. ವಿಶೇಷವೇನೆಂದರೆ 13ನೇ ಶತಮಾನದಲ್ಲಿ ಕಟ್ಟಿದ ಈ ಚರ್ಚ್, ಗುಡ್ಡದ ಅಂಚಿಗೆ ಇರದೆ ಸಾಕಷ್ಟು ಒಳಭಾಗದಲ್ಲಿತ್ತು. ಆದರೆ ನೂರಾರು ವರ್ಷಗಳ ಸವಕಳಿಗೆ ಒಳಗಾಗಿ ಬುಡದ ಮಣ್ಣು ಸಡಿಲಗೊಂಡು, 1928ರಲ್ಲಿ ಚರ್ಚಿನ ಅರ್ಧ ಭಾಗವೇ ಕುಸಿದು ಬಿದ್ದಿತ್ತು. ಈಗ ಪುನರ್ನಿರ್ಮಾಣಗೊಂಡು ಕಾಂಕ್ರೀಟ್ ಅಡಿಪಾಯದ ಮೇಲೆ ಭದ್ರವಾಗಿ ನಿಂತಿದೆ.

ಸಂಜೆಯಾಗುತ್ತಿತ್ತು. ಗಾಳಿ ನಿಧಾನವಾಗಿ ತಂಪನ್ನು ಹೊತ್ತು ತರುತ್ತಿತ್ತು. ಹಕ್ಕಿಗಳು ಗೂಡು ಸೇರುವ ಗಡಿಬಿಡಿಯಲ್ಲಿದ್ದವು. ಅಲ್ಲೇ ಕಲ್ಲು ಬಂಡೆಯೊಂದರ ಮೇಲೆ ಕುಳಿತು ಸೂರ್ಯಾಸ್ತದ ಅಪರೂಪದ ಕ್ಷಣಗಳನ್ನು ಕಣ್ತುಂಬಿಕೊಂಡು ಅಂದಿನ ದಿನಕ್ಕೊಂದು ವಿದಾಯ ಹೇಳಿದೆವು.



ಮೊನ್ಸ್ ಕ್ಲಿಂಟ್‌ನ ಸುಂದರ ದೃಶ್ಯ